8

# ಹಳೆಯದರಿಂದ ಹೊಸದಕ್ಕೆ: ಒಡಂಬಡಿಕೆಯಲ್ಲಿ ಒಂದು ಬದಲಾವಣೆ

*" 'ಯೆಹೋವನು ಇಂತೆನ್ನುತ್ತಾನೆ - ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು ಐಗುಪ್ತ ದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದ್ದಲ್ಲ' " (ಯೆರೆಮೀಯ 31:31, 32ಎ).*

ಬೈಬಲಿನ ದೊಡ್ಡ ಒಡಂಬಡಿಕೆಯು ಹೊಸ ಒಡಂಬಡಿಕೆಯಾಗಿದೆ. ಅದು ಯೋಜಿಸಲ್ಪಟ್ಟಿತು. ವಾಗ್ದಾನ ಮಾಡಲ್ಪಟ್ಟಿತು, ಮತ್ತು ಪ್ರವಾದಿಸಲ್ಪಟ್ಟಿತು ಹಾಗೂ ಈಗ ಕೊಡಲ್ಪಟ್ಟಿತು ಮತ್ತು ಪ್ರತಿಷ್ಠಿಸಲ್ಪಟ್ಟಿತು. ಹಳೇ ಒಡಂಬಡಿಕೆಯಲ್ಲಿ ಹೊಸ ಒಡಂಬಡಿಕೆಯನ್ನು ಕುರಿತು ಪ್ರವಾದನೆಗಳು ಕಂಡು ಬರುತ್ತವೆ. ಇವುಗಳಲ್ಲಿ ಅತೀ ಹೆಚ್ಚು ಪೂರ್ಣವಾದದ್ದೂ ಯೆರೆಮೀಯ 31:31-34ರಲ್ಲಿ ಇರುತ್ತದೆ.

ಇತರ ವಾಕ್ಯಭಾಗಗಳಲ್ಲಿಯೂ ಸಹ ಹೊಸ ಒಡಂಬಡಿಕೆಗೆ ಸಂಬಂಧಿಸಿದ ಹೇಳಿಕೆಗಳನ್ನು ಕಂಡು ಕೊಳ್ಳಬಹುದು. ಉದಾಹರಣೆಯಾಗಿ, ಯೆಶಾಯ 55:3 ಹೀಗೆ ಹೇಳುತ್ತದೆ,

> "ಕಿವಿಯನ್ನು ಇತ್ತ ತಿರುಗಿಸಿರಿ, ನನ್ನ ಬಳಿಗೆ ಬನ್ನಿರಿ;
> ಆಲಿಸಿದರೆ ಬದುಕಿ ಬಾಳುವಿರಿ; ದಾವೀದನಿಗೆ ಖಂಡಿತವಾಗಿ ವಾಗ್ದಾನ ಮಾಡಿದ ಕೃಪಾವರಗಳನ್ನು ನಿಮಗೆ ಕೊಡುತ್ತೇನೆಂಬ ಶಾಶ್ವತವಾದ ಒಡಂಬಡಿಕೆಯನ್ನು ನಿಮ್ಮೊಂದಿಗೆ ಮಾಡಿಕೊಳ್ಳುವೆನು."

ಪೌಲನು ಈ ವಾಕ್ಯವನ್ನು ಅಪೊಸ್ತಲರ ಕೃತ್ಯಗಳು 13:34ರಲ್ಲಿ ಯೇಸುವಿಗೆ ಅನ್ವಯಿಸಿದನು. ಹೊಸ ಒಡಂಬಡಿಕೆಗೆ, ನಿತ್ಯವಾದ ಒಡಂಬಡಿಕೆಗೆ ಇಲ್ಲಿ ಇತರ ಕೆಲವು ಉಲ್ಲೇಖಗಳಿವೆ (ಇಬ್ರಿಯ 13:20).

> "ನಾನು ನಿಮಗೆ ಹಿತಮಾಡುವದನ್ನು ಬಿಟ್ಟು ವಿಮುಖನಾಗೆನು ಎಂಬುವ ಶಾಶ್ವತವಾದ ಒಡಂಬಡಿಕೆಯನ್ನು ಅವರೊಂದಿಗೆ ಮಾಡಿಕೊಳ್ಳುವೆನು; ಅವರು ನನ್ನಿಂದಗಲದಂತೆ ಅವರ ಹೃದಯದೊಳಗೆ ನನ್ನ ಮೇಲಣ ಭಯ ಭಕ್ತಿಯನ್ನು ನೆಲೆಗೊಳಿಸುವೆನು" (ಯೆರೆಮೀಯ 32:40; ನೋಡಿರಿ 50:5).

> "ನಾನು ಅವರೊಂದಿಗೆ ಸಮಾಧಾನದ ಒಡಂಬಡಿಕೆಯನ್ನು ಮಾಡಿಕೊಳ್ಳುವೆನು; ಅದು ಶಾಶ್ವತವಾಗಿರುವದು; ನಾನು ಅವರನ್ನು ನೆಲೆಗೊಳಿಸಿ ವೃದ್ಧಿಮಾಡಿ ನನ್ನ

ಪವಿತ್ರಾಲಯವನ್ನು ಅವರ ನಡುವೆ ಯುಗಯುಗಾಂತರಕ್ಕೂ ನಿಲ್ಲಿಸುವೆನು" (ಯೆಹೆಜ್ಕೇಲ 37:26; ನೋಡಿರಿ 16:60-62).

"ಆ ಪ್ರಭುವು ಒಂದು ವಾರದ ಮಟ್ಟಿಗೆ ಬಹು ಜನರೊಂದಿಗೆ ದೃಢವಾದ ಒಡಂಬಡಿಕೆಯನ್ನು ಮಾಡಿಕೊಳ್ಳುವನು" (ದಾನಿಯೇಲ 9:27ಎ).

"ಇಗೋ ನನ್ನ ದೂತನನ್ನು ಕಳುಹಿಸುತ್ತೇನೆ, ಆತನು ನನ್ನ ಮುಂದೆ ದಾರಿಯನ್ನು ಸರಿಮಾಡುವನು; ನೀವು ಹಂಬಲಿಸುವ ಕರ್ತನು ತನ್ನ ಆಲಯಕ್ಕೆ ಫಕ್ಕನೆ ಬರುವನು, ಆಹಾ ನಿಮಗೆ ಇಷ್ಟನಾದ ಒಡಂಬಡಿಕೆಯ ದೂತನು ಐತರುತ್ತಾನೆ;" ಇದು ಸೇನಾಧಿಪತಿಯಾದ ಯೆಹೋವನ ನುಡಿ (ಮಲಾಕಿಯ 3:1).

## ಹಳೇ ಒಡಂಬಡಿಕೆ ಉಪೇಕ್ಷೆ ಮಾಡಲ್ಪಟ್ಟಿದ್ದು

ಇಸ್ರಾಯೇಲ ಜನಾಂಗದ ಅವನತಿಯ ಸಮಯದಲ್ಲಿ ಯೆರೆಮೀಯನು ಪ್ರವಾದಿಸಿದನು, ಅಬ್ರಹಾಮನ, ಇಸಾಕ ಮತ್ತು ಯಾಕೋಬನ ಅಲೆಮಾರಿ ಗೋತ್ರಗಳನ್ನು ಐಗುಪ್ತದ ಮುಖಾಂತರವಾಗಿ ಕಾನಾನಿಗೆ ದೇವರು ತಂದಿದ್ದನು ಮತ್ತು ಅಲ್ಲಿ ಅವರು ಒಂದು ದೊಡ್ಡ ಜನಾಂಗವಾಗಿ ನೆಲೆಸಿದ್ದರು. ನ್ಯಾಯ ಸ್ಥಾಪಕರ ಕಾಲದಲ್ಲಿ ಇಸ್ರಾಯೇಲ್ಯರು ದೇವರಿಗೆ ಬೆನ್ನುಹಾಕಿ ಹೋದರು ಮತ್ತು ದೇವರು ಅವರಿಗೆ ಕೊಟ್ಟ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಜೀವಿಸಲಿಲ್ಲ, ಅದರ ಬದಲು, "ಪ್ರತಿಯೊಬ್ಬನೂ ಮನಸ್ಸಿಗೆ ಬಂದ ಹಾಗೆಯೇ ನಡೆಯುತ್ತಿದ್ದನು" (ನ್ಯಾಯಸ್ಥಾಪಕರು 17:6ಬಿ). "ನಾವು ಈಗ ಈ ಸ್ಥಳದಲ್ಲಿ ನಡೆಯುವಂತೆ ಎಲ್ಲರೂ ತಮ್ಮ ತಮ್ಮ ಮನಸ್ಸಿಗೆ ತೋಲಿದಂತೆ ನಡೆಯಕೂಡದು" (ಧರ್ಮೋಪದೇಶಕಾಂಡ 12:8) ಎಂದು ಮೋಶೆಯ ಮುಖಾಂತರ ದೇವರು ಅವರನ್ನು ಎಚ್ಚರಿಸಿದ್ದರೂ ಇದು ನಡೆಯಿತು.

ನ್ಯಾಯಸ್ಥಾಪಕರ ಪುಸ್ತಕದಲ್ಲಿ, ಯೆಹೋಶುವನಿಂದ ನಡಿಸಲ್ಪಟ್ಟ ಸಂತತಿಯು ತೀರಿಹೋದನಂತರ (ನ್ಯಾಯಸ್ಥಾಪಕರು 2:7) ಪಾಪಿಗಳಾದ ಇಸ್ರಾಯೇಲ್ಯರನ್ನು ದೇವರು ಹೀಗೆ ನಡಿಸಿದನೆಂಬ ವಿವರಣೆ ಇರುತ್ತದೆ.

ಯೆಹೋವನು ತಾನು ಮೊದಲೇ ಆಣೆಯಿಟ್ಟು ಹೇಳಿದಂತೆ ಎಲ್ಲಿ ಹೋದರೂ ಆತನ ಕೈ ಅವರಿಗೆ ವಿರೋಧವಾಗಿಯೇ ಇತ್ತು, ಅವರಿಗೆ ಬಹು ಸಂಕಟವಾಯಿತು.

ಆಗ ಯೆಹೋವನು ಅವರನ್ನು ಸೂರೆ ಮಾಡುವವರ ಕೈಯಿಂದ ತಪ್ಪಿಸುವದಕ್ಕೋಸ್ಕರ ನ್ಯಾಯಸ್ಥಾಪಕರನ್ನು ಕಳುಹಿಸಿದರೂ ಇಸ್ರಾಯೇಲ್ಯರು ಅವರ ಮಾತನ್ನೂ ಕೇಳದೇ ಅನ್ಯದೇವತೆಗಳನ್ನು ಪೂಜಿಸಿ ಅವುಗಳಿಗೆ ಅಡ್ಡಬಿದ್ದು ದೇವದ್ರೋಹಿಗಳಾದರು. ಯೆಹೋವನ ಆಜ್ಞೆಗಳನ್ನು ಕೈಕೊಳ್ಳುತ್ತಿದ್ದ ತಮ್ಮ ಪಿತೃಗಳ ಮಾರ್ಗವನ್ನು ಬೇಗನೆ ಬಿಟ್ಟು ಬಿಟ್ಟರು; ಅವರಂತೆ ನಡೆಯಲೇ ಇಲ್ಲ. ವೈರಿಗಳ ಹಿಂಸೆಯನ್ನು ತಾಳಲಾರದ ಇಸ್ರಾಯೇಲ್ಯರ ಗೋಳಾಟವನ್ನು ಯೆಹೋವನು ಕೇಳಿ ಕನಿಕರಪಟ್ಟು ನ್ಯಾಯಸ್ಥಾಪಕರನ್ನು ಎಬ್ಬಿಸಿ ಅವರ ಜೀವಮಾನವೆಲ್ಲಾ ಅವರ ಸಂಗಡ ಇದ್ದು ಅವರಮೂಲಕವಾಗಿ ಇಸ್ರಾಯೇಲ್ಯರನ್ನು ಶತ್ರುಗಳಿಂದ ಬಿಡಿಸಿದನು. ಅಂಥ ನ್ಯಾಯಸ್ಥಾಪಕರು ತೀರಿಹೋದನಂತರ ಇಸ್ರಾಯೇಲ್ಯರು ತಿರಿಗಿಕೊಂಡು ತಮ್ಮ ಹಿರಿಯರಿಗಿಂತಲೂ ಭ್ರಷ್ಟರಾಗಿ ಅನ್ಯದೇವತೆಗಳನ್ನು ಅವಲಂಬಿಸಿ ಸೇವಿಸಿ ಅವುಗಳಿಗೆ ಅಡ್ಡಬಿದ್ದರು; ಅವರು ಈ ತಮ್ಮ ದುರ್ಮಾರ್ಗವನ್ನೂ

> ಮೊಂಡತನವನ್ನೂ ಬಿಡಲೇ ಇಲ್ಲ. ಆದದರಿಂದ ಯೆಹೋವನ ಕೋಪವು ಇಸ್ರಾಯೇಲ್ಯರ ಮೇಲೆ ಉರಿಯಹತ್ತಿತು; ಆತನು, "ಈ ಜನರ ಪಿತೃಗಳಿಗೆ ನಾನು ಕೊಟ್ಟ ನಿಬಂಧನೆಯನ್ನು ಇವರು ಕೈಕೊಳ್ಳಲಿಲ್ಲ; ನನ್ನ ಮಾತಿಗೆ ಕಿವಿಗೊಡಲಿಲ್ಲ. ಹೀಗಿರುವದರಿಂದ ಯೆಹೋಶುವನು ಸಾಯುವ ಮೊದಲು ಹೊರಡಿಸದೆ ಬಿಟ್ಟ ಜನಾಂಗಗಳಲ್ಲಿ ನಾನೂ ಒಂದನ್ನಾದರೂ ಹೊರಡಿಸುವದಿಲ್ಲ. ಇವರೂ ತಮ್ಮ ಹಿರಿಯರಂತೆ ಜಾಗರೂಕತೆಯಿಂದ ಯೆಹೋವನಾದ ನನ್ನ ಮಾರ್ಗದಲ್ಲಿ ನಡೆಯುವರೋ ಇಲ್ಲವೋ ಎಂದು ಈ ಜನಾಂಗಗಳ ಮೂಲಕ ವಾಗಿ ಪರೀಕ್ಷಿಸುವೆನು ಅಂದನು" (ನ್ಯಾಯಸ್ಥಾಪಕರು 2:15-22).

ಬೆನ್ಯಾಮಿನ್ ಗೋತ್ರದಿಂದ ಸೌಲನು ಅರಸನಾಗಿ ಮಾಡಲ್ಪಟ್ಟಾಗ, ನ್ಯಾಯಸ್ಥಾಪಕರ ಅವಧಿಯು ಮುಕ್ತಾಯಗೊಂಡಿತು. ಸೌಲನ ಅವಿಧೇಯತೆಯ ನಿಮಿತ್ತವಾಗಿ, ದೇವರು ಅವನನ್ನು ಸಿಂಹಾಸನದಿಂದ ತಳ್ಳಿ, ಇಸ್ರಾಯೇಲಿನ ಮೇಲೆ ದಾವೀದನನ್ನು ಅರಸನನ್ನಾಗಿ ಮಾಡಿದನು. ಇಸ್ರಾಯೇಲು ತನ್ನ ಉನ್ನತ ಮಹಿಮೆಯಲ್ಲಿದ್ದಾಗ ಆಳಿಕೆ ಮಾಡಿದ ದಾವೀದನ ಮಗ ಸೊಲೊಮೋನನು, ಅವನ ಅನೇಕ ಹೆಂಡತಿಯರು ಅವನನ್ನು ವಿಗ್ರಹಾರಾಧನೆಗೆ ನಡಿಸಿದ್ದರಿಂದ, ದೇವರಿಂದ ತಿರುಗಿಕೊಂಡನು. ಈ ಕಾರಣದಿಂದ ದೇವರು ಸೊಲೊಮೋನನ ಮಗ ರೆಹೊಬ್ಬಾಮನಿಗೆ ಕೇವಲ ಎರಡು ಗೋತ್ರಗಳನ್ನೂ ಕೊಟ್ಟನು ಮತ್ತು ಉಳಿದ ಹತ್ತು ಗೋತ್ರಗಳನ್ನು ಯಾರೊಬ್ಬಾಮನಿಗೆ ಕೊಟ್ಟನು (1 ಅರಸುಗಳು 11:3, 4, 31). ಉತ್ತರದಲ್ಲಿಯ ಹತ್ತು ಗೋತ್ರಗಳು ಇಸ್ರಾಯೇಲ ರಾಜ್ಯ ಎಂದು ತಿಳಿಯಲ್ಪಟ್ಟವು, ಮತ್ತು ದಕ್ಷಣದಲ್ಲಿಯ ಎರಡು ಗೋತ್ರ ಗಳು, ಯೆಹೂದಿ ಮತ್ತು ಬೆನ್ಯಾಮಿನ್ (ಲೇವಿಯರು ಕೂಡಿಕೊಳ್ಳುವದರಿಂದ; ನೋಡಿರಿ 2 ಪೂರ್ವಕಾಲವೃತ್ತಾಂತ 11:14) ಯೆಹೂದ ರಾಜ್ಯ ಎಂದು ತಿಳಿಯಲ್ಪಟ್ಟವು.

ವಿವಿಧ ಅರಸರ ಪರಂಪರೆಯನ್ನು ಅನುಸರಿಸಿ, ಇಸ್ರಾಯೇಲ ರಾಜ್ಯವು ಭ್ರಷ್ಟವಾಯಿತು. ಕೆಲ ಸಮಯದ ವರೆಗೆ ಯೆಹೂದ ರಾಜ್ಯವು ಒಂದು ರೀತಿಯಲ್ಲಿ ಉತ್ತಮವಾಗಿ ಮುನ್ನಡೆಯಿತು. ಈ ಕೆಳಗಿನಂತೆ ಸಾರಾಂಶವು ಕೊಡಲ್ಪಟ್ಟಿದೆ;

> ಯೆಹೋವನು ದರ್ಶಿಗಳೆನಿಸಿಕೊಂಡ ತನ್ನ ಪ್ರವಾದಿಗಳ ಮುಖಾಂತರವಾಗಿ ಇಸ್ರಾಯೇಲ್ಯ ಯೆಹೂದ್ಯರಿಗೆ, "ನೀವು ನಿಮ್ಮ ದುರಾಚಾರವನ್ನು ಬಿಟ್ಟು ನಾನು ನಿಮ್ಮ ಪಿತೃಗಳಿಗೂ ನನ್ನ ಸೇವಕರಾದ ಪ್ರವಾದಿಗಳ ಮುಖಾಂತರವಾಗಿ ನಿಮಗೂ ಕೊಟ್ಟಂಥ ನನ್ನ ಎಲ್ಲಾ ಆಜ್ಞಾ ನಿಯಮ ವಿಧಿಗಳನ್ನು ಕೈಕೊಂಡು ನಡೆಯಿರಿ" ಎಂದು ಖಂಡಿತವಾಗಿ ಹೇಳಿದಾಗ ಅವರು ದೇವರಾದ ಯೆಹೋವನನ್ನು ನಂಬದೆ ಆತನ ಆಜ್ಞೆಗಳಿಗೆ ಮಣಿಯದೆ ಇದ್ದ ತಮ್ಮ ಹಿರಿಯರಂತೆ ಆತನಿಗೆ ಕಿವಿಗೊಡದೆ ಹೋದರು; ಆತನು ತಮ್ಮ ಪಿತೃಗಳಿಗೆ ಕೊಟ್ಟ ವಿಧಿನಿಬಂಧನೆಗಳನ್ನೂ ತಮಗೆ ಹೇಳಿಸಿದ ಬುದ್ಧಿ ವಾಕ್ಯಗಳನ್ನೂ ತಿರಸ್ಕರಿಸಿ ಮಿಥ್ಯಾ ದೇವತೆಗಳನ್ನು ಸೇವಿಸಿ ನಿಷ್ಪ್ರಯೋಜಕರಾದರು; ಸುತ್ತಣ ಜನಾಂಗಗಳನ್ನು ಅನುಸರಿಸಬಾರದೆಂದು ಯೆಹೋವನು ಆಜ್ಞಾಪಿಸಿದರೂ ಅವರು ಕೇಳದೆ ಅವರನ್ನು ಅನುಸರಿಸಿದರು; ತಮ್ಮ ದೇವರಾದ ಯೆಹೋವನ ಆಜ್ಞೆಗಳನ್ನೆಲ್ಲಾ ಮೀರಿ ಎರಡು ಎರಕದ ಬಸವಮೂರ್ತಿಗಳು, ಅಶೇರ ವಿಗ್ರಹ ಸ್ತಂಭ ಇವುಗಳನ್ನು ಮಾಡಿಕೊಂಡರು. ಆಕಾಶ ಸೈನ್ಯ ಬಾಳ್ ದೇವತೆ ಇವುಗಳನ್ನು ಪೂಜಿಸಿದರು; ತಮ್ಮ ಗಂಡು, ಹೆಣ್ಣು ಮಕ್ಕಳನ್ನು ಆಹುತಿಕೊಟ್ಟರು; ಯೆಹೋವನ ದೃಷ್ಟಿಯಲ್ಲಿ ಕೆಟ್ಟವುಗಳಾಗಿರುವ ಕಣಿ ಹೇಳುವುದು, ಯಂತ್ರಮಂತ್ರಗಳನ್ನು ಮಾಡುವದು ಮೊದಲಾದ ದುಷ್ಕೃತ್ಯಗಳಿಗೆ ತಮ್ಮನ್ನು ಮಾರಿಬಿಟ್ಟು ಆತನಿಗೆ ಕೋಪವನ್ನೆಬ್ಬಿಸಿದರು, ಅವರು ಈ ಪ್ರಕಾರ

ನಡೆದದರಿಂದ ಯೆಹೋವನು ಅವರ ಮೇಲೆ ಬಹಳವಾಗಿ ಕೋಪಗೊಂಡು ಯೆಹೂದ ಕುಲದವರ ಹೊರತು ಉಳಿದ ಎಲ್ಲಾ ಕುಲಗಳವರನ್ನು ತನ್ನ ಸನ್ನಿಧಿಯಿಂದ ತಳ್ಳಿಬಿಟ್ಟನು (2 ಅರಸುಗಳು 17:13-18).

ಯೆಹೂದವನ್ನು ಶಿಕ್ಷಿಸಲು ದೇವರು ನಿರ್ಣಯಿಸಿ ಕೊಳ್ಳುವದಕ್ಕೆ ಅದು ಭ್ರಷ್ಟವಾಗಲು ಬಹಳ ವರ್ಷಗಳು ದಾಟಿಹೋಗ ಬೇಕಾಗಿರಲಿಲ್ಲ. "ಇಸ್ರಾಯೇಲ್ಯರನ್ನು ತೆಗೆದುಹಾಕಿದಂತೆ ಯೆಹೂದ್ಯರನ್ನೂ ನನ್ನ ಸನ್ನಿಧಿಯಿಂದ ತೆಗೆದು ಹಾಕುವೆನು; ನಾನು ಆರಿಸಿಕೊಂಡ ಯೆರೂಸಲೇಮ್ ಪಟ್ಟಣವನ್ನೂ ನನ್ನ ನಾಮ ಮಹತ್ತಿಗೋಸ್ಕರ ಸ್ವೀಕರಿಸಿಕೊಂಡ ದೇವಾಲಯವನ್ನೂ ತಿರಸ್ಕರಿಸುವೆನು ಎಂದು ಕರ್ತನು ಹೇಳಿದನು" (2 ಅರಸುಗಳು 23:27).

## ಹೊಸ ಒಡಂಬಡಿಕೆಯು ಪ್ರವಾದಿಸಲ್ಪಟ್ಟದ್ದು

ಈ ಐತಿಹಾಸಿಕ ಹಿನ್ನೆಲೆಯಲ್ಲಿ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳು ವೆನೆಂದು ದೇವರು ಪ್ರವಾದಿಸಿದನು:

> ಯೆಹೋವನು ಇಂತೆನ್ನುತ್ತಾನೆ, "ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು;" ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು ಐಗುಪ್ತ ದೇಶದೊಳ ಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ. ಯೆಹೋವನು ಇಂತೆನ್ನುತ್ತಾನೆ, "ಆ ದಿನಗಳು ಬಂದಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು" "ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು, ಅವರ ಹೃದಯದೊ ಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ನೆರೆಹೊರೆಯವರೂ ಅಣ್ಣ ತಮ್ಮಂದಿರೂ ಒಬ್ಬರಿಗೊಬ್ಬರು - ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ. ಇದು ಯೆಹೋವನ ನುಡಿ" (ಯೆರೆಮೀಯ 31:31-34).

ಹೊಸ ಒಡಂಬಡಿಕೆಯು ಐಗುಪ್ತ ದೇಶದೊಳಗಿಂದ ಇಸ್ರಾಯೇಲ್ಯರನ್ನು ಹೊರತಂದಾಗ ಅವರೊಂದಿಗೆ ದೇವರು ಮಾಡಿಕೊಂಡ, ಇಸ್ರಾಯೇಲ್ಯರು ಮತ್ತು ಯೆಹೂದ್ಯರು ಮುರಿದ ಒಡಂಬಡಿಕೆಯಂತೆ ಇರುವದಿಲ್ಲ. ಹೊಸ ಒಡಂಬಡಿಕೆಯ ಬರಹಗಾರರು ಹೊಸ ಒಡಂಬಡಿಕೆಯು ದೇವರ ಯೋಜನೆಯ ಭಾಗವಾಗಿತ್ತೆಂದು ಸ್ಥಾಪಿಸುವದಕ್ಕಾಗಿ ಈ ವಾಕ್ಯವನ್ನು ಉಲ್ಲೇಖಿಸಿದ್ದಾರೆ (ಇಬ್ರಿಯ 8:6-13).

ಯೆರೆಮೀಯನ ಮುಖಾಂತರ ದೇವರು ಪ್ರಕಟಿಸಿದ ಈ ಪ್ರವಾದನೆಯು ಬಹಳ ಮಹತ್ವದ್ದಾಗಿದ್ದು, ಅದು ಹೇಳಿದ ಎಲ್ಲವನ್ನೂ ಜಾಗರೂಕತೆಯಿಂದ ಯೋಚಿಸುವ ಅಗತ್ಯತೆಯಿದೆ.

1. *"ಹೊಸ ಒಡಂಬಡಿಕೆ."* ಒಡಂಬಡಿಕೆಯು "ಹೊಸ"ದಾಗಿರುವದೆಂಬ ಹೇಳಿಕೆಯು, ಅದರಂತಿದ್ದ ಬೇರೆ ಒಡಂಬಡಿಕೆಯು ಇನ್ನೂ ಮಾಡಲ್ಪಟ್ಟಿರುವದಿಲ್ಲ ಎಂಬುದನ್ನು ಅನ್ವಯಿಸಿರುತ್ತದೆ. ಅದು ಇನ್ನೊಂದು ಒಡಂಬಡಿಕೆಯನ್ನು ಪುನಃ ಸಿದ್ಧ ಪಡಿಸುವುದಾಗಿರುವದಿಲ್ಲ, ಆದರೆ ಯಾವುದೇ ಹಿಂದಿನ ಒಡಂಬಡಿಕೆಯಿಂದ ಇಲ್ಲವೇ ಪ್ರತಿರೂಪಕ್ಕಿಂತ ಸ್ವಭಾವದಲ್ಲಿ ಹೊಸದಾದದ್ದೂ ಭಿನ್ನವಾದದ್ದೂ ಆಗಿರುವುದು.

2. *"ನಾನು ಮಾಡಿಕೊಳ್ಳುವ ... ದಿನಗಳು ಬರುತ್ತಲಿವೆ."* ಒಡಂಬಡಿಕೆಯನ್ನು ಕುರಿತು "ನಾನು ಮಾಡಿಕೊಳ್ಳುವೆನು" ಎಂದು ದೇವರು ಹೇಳಿದ ಸಂಗತಿಯು, ಅದು ಮೊದಲು ಮಾಡಲ್ಪಟ್ಟಿರುವದಿಲ್ಲ, ಆದರೆ ಭವಿಷ್ಯದಲ್ಲಿ ಮಾಡಲ್ಪಡುವುದು ಎಂದರ್ಥವಾಗ ತಕ್ಕದ್ದು. ಕೊಡಲ್ಪಡುವಾಗ, ಅದು ದೇವರು ನೇಮಿಸುವ ನಿಯಮಗಳಿಗನುಗುಣವಾದ ದೇವರ ಉತ್ಪಾದನೆಯಾಗಿರುವುದು.

3. *"ಅವರ ಪಿತೃಗಳೊಂದಿಗೆ ನಾನು ಮಾಡಿಕೊಂಡ ಒಡಂಬಡಿಕೆಯಂತೆ ಇರುವದಿಲ್ಲ."* ಒಂದು ಹೊಸ ಒಡಂಬಡಿಕೆಯಾಗಿದ್ದು, ಅದು ದೇವರು ಮೊದಲು ಮಾಡಿಕೊಂಡ ಯಾವುದೇ ಒಡಂಬಡಿಕೆಗಿಂತ ಭಿನ್ನವಾದದ್ದಾಗಿರುವುದು (ವಿಮೋಚನಕಾಂಡ 34:27, 28; ಧರ್ಮೋಪದೇಶಕಾಂಡ 4:14; 10:1-5).

ಈ ಒಡಂಬಡಿಕೆಯು ದೇವರು ಇಸ್ರಾಯೇಲ್ಯರ ಪಿತೃಗಳನ್ನು ಐಗುಪ್ತದಿಂದ ಹೊರಗೆ ತಂದಾಗ, ಅವರೊಂದಿಗೆ ಮಾಡಿಕೊಂಡ ಒಡಂಬಡಿಕೆಯಂತೆ ಇರುವದಿಲ್ಲ ಎಂದು ಯೋಚಿಸುವುದು ಮಹತ್ವದ್ದಾಗಿದೆ. ಆ ಒಡಂಬಡಿಕೆಯು ಯಾಕೆ ನಮೂದಿಸಲ್ಪಟ್ಟಿತು, ಬೇರೆ ಒಡಂಬಡಿಕೆಗಳು ಯಾಕೆ ಹೇಳಲ್ಪಡಲಿಲ್ಲ? ಒಡಂಬಡಿಕೆಯ ನಿಮಿತ್ತವಾಗಿ ದೇವರೊಂದಿಗಿನ ಅವರ ಸಂಬಂಧವು ಸ್ಥಿರಪಡಿಸಲ್ಪಟ್ಟಿತೆಂಬುದನ್ನು ಇಸ್ರಾಯೇಲ್ಯರು ನಂಬಿದ್ದರು. ಅವರು ಅದರ ಮೇಲೆ ಅವಲಂಭಿಸಿದ್ದರು ಮತ್ತು ದೇವರು ತಮ್ಮ ದೇವರಾಗಿದ್ದಾನೆ, ಆತನು ಅವರೊಂದಿಗಿರುತ್ತಾನೆ ಮತ್ತು ಆತನು ಅವರನ್ನು ಕಾಪಾಡುತ್ತಾನೆ ಎಂಬ ಭರವಸೆಯೊಂದಿಗೆ ದೃಷ್ಟಿಸಿದರು. ಸತ್ಯದಲ್ಲಿ, ಅವರು ಒಡಂಬಡಿಕೆಯನ್ನು ಕೈಕೊಂಡರೆ ದೇವರು ಅವರನ್ನು ಕಾಪಾಡುವನು - ಆದರೆ ಅವರು ಅದನ್ನು ಮುರಿದರೆ ಕಾಪಾಡುವದಿಲ್ಲ.

ಒಡಂಬಡಿಕೆಯಲ್ಲಿ ಅವರ ನಂಬಿಕೆಯ ಸೂಚನೆಯು ಯುದ್ಧ ರಂಗದಲ್ಲಿ ಒಡಂಬಡಿಕೆಯ ಮಂಜೂಷವು ತರಲ್ಪಟ್ಟಾಗ ಅವರ ಭರವಸೆಯು ಹೆಚ್ಚಾದದ್ದರಲ್ಲಿ ಕಂಡುಬರುತ್ತದೆ (1 ಸಮುವೇಲ 4:5). ಎರಡು ಕಲ್ಲಿನ ಹಲಿಗೆಗಳೊಂದಿಗೆ ಇದ್ದ ಮುಂಜೂಷದ ಪ್ರಸನ್ನತೆಯು ದೇವರು ತಮಗೆ ಸಹಾಯ ಮಾಡುವನು ಮತ್ತು ಯುದ್ಧ ದಲ್ಲಿ ಜಯಕೊಡುವನು ಎಂಬ ಭರವಸೆಯನ್ನು ಇಸ್ರಾಯೇಲ್ಯರಿಗೆ ಕೊಟ್ಟಿತು.

4. *"ಅವರು ಮುರಿದ ಒಡಂಬಡಿಕೆ."* ಇಸ್ರಾಯೇಲ್ಯರು ಮೀರಿದ ಹಾಗೂ ಕೊಡಲ್ಪಟ್ಟ ದಿನದಲ್ಲಿಯೇ ಮುರಿಯಲ್ಪಟ್ಟ ಒಡಂಬಡಿಕೆಯು ದಶಾಜ್ಞೆಗಳು ಮತ್ತು ಒಡಂಬಡಿಕೆಯ ಭಾಗಗಳಾಗಿದ್ದ ಇತರ ನಿಯಮಗಳು ಆಗಿದ್ದವು. ಅದನ್ನು ಗೌರವಿಸುವಲ್ಲಿ ಮತ್ತು ಕೈಕೊಳ್ಳುವದರಲ್ಲಿ ಅವರ ಸೋಲು ಪುನಃ, ಪುನಃ ನಮೂದಿಸಲ್ಪಟ್ಟಿದೆ, ಅವರು ಅದನ್ನು ತಾತ್ಸಾರ ಮಾಡುವರು (ಧರ್ಮೋಪದೇಶಕಾಂಡ 31:20) ಮತ್ತು ಮುರಿಯುವರು ಎಂದು ಪ್ರವಾದಿಗಳು ಘೋಷಿಸಿದರು. ಇದಲ್ಲದೆ, ಅವರು ಅದನ್ನು ಮುರಿದರೆಂದು ಬೈಬಲಿನ ಹೇಳಿಕೆಗಳು ತೋರಿಸುತ್ತವೆ (ಯಾಜಕಕಾಂಡ 26:15; ಯೆಶಾಯ 24:5; 33:8; ಯೆರೆಮೀಯ 11:10; ಯೆಹೆಜ್ಕೇಲ 16:59), ಅವರು ಅದನ್ನು ಮರೆತು ಬಿಟ್ಟರು (ಧರ್ಮೋಪದೇಶಕಾಂಡ 29:25; 1 ಅರಸುಗಳು 19:10, 14), ಅದನ್ನು ಮೀರಿದರು (ಯೆಹೋಶುವ 7:15; ನ್ಯಾಯಸ್ಥಾಪಕರು 2:20; 2 ಅರಸುಗಳು

18:12; ಯೆರೆಮೀಯ 34:18; ಹೋಶೇಯ 8:1), ತಿರಸ್ಕರಿಸಿದರು (2 ಅರಸುಗಳು 17:15), ಅದನ್ನು ಅತಿಕ್ರಮಿಸಿದರು (ಕೀರ್ತನೆ 55:20), ಅದನ್ನು ಕೈಕೊಳ್ಳಲಿಲ್ಲ (ಕೀರ್ತನೆ 78:10), ಅದಕ್ಕೆ ಅಪನಂಬಿಗಸ್ತರಾಗಿದ್ದರು (ಕೀರ್ತನೆ 78:37), ಮತ್ತು ಅದನ್ನು ಭಂಗಪಡಿಸಿದರು (ಯೆಹೆಜ್ಕೇಲ 44:7). ಯೆರೆಮೀಯ 31:32ರಲ್ಲಿ ಹೊಸ ಒಡಂಬಡಿಕೆಯು, "ನಿತ್ಯವಾದ ಒಡಂಬಡಿಕೆಯು" (ಇಬ್ರಿಯ 13:20) ಇಸ್ರಾಯೇಲ್ಯರು ಮುರಿದಂಥ ಒಡಂಬಡಿಕೆ ಯಂಥದ್ದಾಗಿರಲಿಕ್ಕಿಲ್ಲ.

5. *"ಅವರ ಹೃದಯದ ಮೇಲೆ ಅದನ್ನು ಬರೆಯುವೆನು."* ಅವರ ಹೃದಯದ ಮೇಲೆ ಹೊಸ ಒಡಂಬಡಿಕೆಯು ಬರೆಯಲ್ಪಡುವುದು ಎಂದು ಹೇಳಲ್ಪಟ್ಟಿದೆ, ಆದರೆ ಹೇಗೆ ಎಂಬುದು ಹೇಳಲ್ಪಟ್ಟಿರುವದಿಲ್ಲ. ಹೊಸ ಒಡಂಬಡಿಕೆಯ ಬೋಧನೆಯ ಮುಖಾಂತರ ಪರಿಶುದ್ಧಾತ್ಮನಿಂದ ಹೃದಯದ ಮೇಲೆ ಬರೆಯಲ್ಪಡುವುದೋ ಇಲ್ಲವೇ ಬೇರೆ ಇತರ ಮಾರ್ಗದಲ್ಲಿ ಹೃದಯದ ಮೇಲೆ ಬರೆಯಲ್ಪಡುವುದೋ ಎಂಬುದು ನಮಗೆ ಹೇಳಲ್ಪಟ್ಟಿರುವದಿಲ್ಲ.[1]

6. *"ಅವರೆಲ್ಲರೂ ನನ್ನನ್ನು ತಿಳಿದಿರುವರು."* ದೇವರ ಬಗೆಗಿನ ಈ ಜ್ಞಾನವು ದೇವರ ಸ್ವಭಾವವನ್ನು ಕುರಿತು ಪ್ರತಿಯೊಬ್ಬ ವ್ಯಕ್ತಿಗೆ ವೈಯಕ್ತಿಕ ಪ್ರಕಟನೆಯಿಂದ ತರಲ್ಪಟ್ಟಿರುವದಿಲ್ಲ. "ಅವರೆಲ್ಲರೂ ನನ್ನನ್ನು ತಿಳಿಯುವರು" ಎಂದು ಆತನು ಹೇಳಿದಾಗ ದೇವರು ತಡೆದುಕೊಳ್ಳಲಿಲ್ಲ, ಆದರೆ ಎಲ್ಲರೂ ಯಾವುದರಿಂದ ತಿಳಿದುಕೊಳ್ಳುವರು ಎಂಬುದನ್ನು ವಿವರಿಸಲು ಮುಂದುವರಿದನು: "ಯಾಕಂದರೆ ನಾನು ಅವರ ಅಪರಾಧವನ್ನು ಕ್ಷಮಿಸುವೆನು, ಮತ್ತು ಅವರ ಪಾಪವನ್ನು ಇನ್ನೆಂದೂ ನಾನು ಜ್ಞಾಪಿಸಿಕೊಳ್ಳು ವದಿಲ್ಲ.'' "For" ಎಂಬುದು ದೇವರು ತನ್ನನ್ನು ಹೇಗೆ ತಿಳಿಯಪಡಿಸುವನು ಎಂಬುದನ್ನು ವಿವರಿಸಲು ಉಪಯೋಗಿಸಲ್ಪಟ್ಟಿದೆ. ಲೋಕದ ಪಾಪಗಳಿಗಾಗಿ ತನ್ನ ಕುಮಾರನನ್ನು ಕೊಡುವದರಿಂದ ಕ್ಷಮಿಸುವ ದೇವರಂತೆ ದೇವರು ತನ್ನ ನಿಜವಾದ ಸ್ವಭಾವವನ್ನು ಪ್ರಕಟಿಸುವನು. ತಂದೆಯ ಹೋಲಿಕೆ ಇರುವ ಯೇಸುವು (ಕೊಲೊಸ್ಸೆ 1:15; ಇಬ್ರಿಯ 1:2, 3) ತಂದೆಯ ಸ್ವಭಾವವನ್ನು ಮಾನವ ಕುಲಕ್ಕೆ ತೋರಿಸುವನು (ಯೋಹಾನ 12:45; 14:9).

## ಮುಕ್ತಾಯ

ಹೊಸ ಒಡಂಬಡಿಕೆಯನ್ನು ಕುರಿತ ಪ್ರವಾದನೆಗಳು ಹಳೇ ಒಡಂಬಡಿಕೆಯಲ್ಲಿ ಕಂಡು ಬರುತ್ತವೆ, ಆದರೆ ಹೊಸ ಒಡಂಬಡಿಕೆಯ ಮಾತುಗಳು ಅಲ್ಲಿ ಕಂಡು ಬರುವದಿಲ್ಲ. ಅವು ಹೊಸ ಒಡಂಬಡಿಕೆಯಲ್ಲಿ ಕಂಡು ಬರುತ್ತವೆ. ಹೊಸ ಒಡಂಬಡಿಕೆಯು ಇಸ್ರಾಯೇಲ್ಯರು ಐಗುಪ್ತನ್ನು ಬಿಟ್ಟಾಗ ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಹಳೇ ಒಡಂಬಡಿಕೆಯಂತಿರುವದಿಲ್ಲ. ದೇವರು ತಾನು ಮಾಡಿಕೊಳ್ಳಲಿಕ್ಕಿದ್ದ ಹೊಸ ಒಡಂಬಡಿಕೆಗಾಗಿ ಯೋಜಿಸಿದನು, ಸಿದ್ಧಪಡಿಸಿದನು ಮತ್ತು ಪ್ರವಾದಿಸಿದನು.

---

ಟಿಪ್ಪಣಿ

[1]"ಹೊಸ ಒಡಂಬಡಿಕೆ - ಒಂದು ಹೊಸ ಆರಾಧನೆ" ಎಂಬ ಪಾಠದಲ್ಲಿ ಹೃದಯವು ಹೆಚ್ಚು ವಿವರವಾಗಿ ಚರ್ಚಿಸಲ್ಪಟ್ಟಿದೆ.

## ದೇವರಿಂದ ಮಾಡಲ್ಪಟ್ಟ ಒಂದು ಒಡಂಬಡಿಕೆ

ಆದಿಕಾಂಡ 9ರಲ್ಲಿ, ಜಲಪ್ರಳಯದನಂತರ, ದೇವರು ನೋಹನಿಗೆ ಅವನೊಂದಿಗೆ, ನೋಹನ ಸಂತತಿಗಳವರೊಂದಿಗೆ (ವಚನ 9) ಮತ್ತು ಪ್ರತಿಯೊಂದು ಜೀವಿಸುವ ಜೀವಿಯೊಂದಿಗೆ (ವಚನ 10) ಒಂದು ಒಡಂಬಡಿಕೆಯನ್ನು ಸ್ಥಾಪಿಸುವೆನೆಂದು ಘೋಷಿಸಿದನು. "ಸ್ಥಿರ ಪ್ರಿತಿಜ್ಞೆ ಮಾಡುತ್ತೇನೆ; ಆ ಪ್ರತಿಜ್ಞೆ ಯಾವದಂದರೆ - ಇನ್ನು ಮೇಲೆ ಎಲ್ಲಾ ಪ್ರಾಣಿಗಳು ಪ್ರಳಯದಿಂದ ನಾಶವಾಗುವದಿಲ್ಲ; ಇನ್ನು ಮುಂದೆ ಭೂಮಿಯನ್ನು ಹಾಳು ಮಾಡುವ ಪ್ರಳಯವು ಬರುವದೇ ಇಲ್ಲ" ಎಂದು ದೇವರು ಹೇಳಿದನು (ವಚನ 11).

ಇದಲ್ಲದೆ, ದೇವರು ಒಡಂಬಡಿಕೆಯನ್ನು ದೃಢಪಡಿಸಲು ಒಂದು ಸಂಕೇತವನ್ನು ಕೊಟ್ಟನು: "ನಾನು ನಿಮ್ಮನ್ನೂ ನಿಮ್ಮ ಸಂಗಡ ಇರುವ ಸಮಸ್ತ ಜೀವರಾಶಿಗಳನ್ನೂ ಕುರಿತು ಎಲ್ಲಾ ತಲತಲಾಂತರಗಳಲ್ಲಿಯೂ ಮಾಡುವ ಈ ಪ್ರತಿಜ್ಞೆಗೆ ಮೇಘಗಳಲ್ಲಿ ನಾನಿಟ್ಟಿರುವ ಮುಗಿಲು ಬಿಲ್ಲೆ ಗುರುತಾಗಿರುವುದು. ನನಗೂ ಭೂಪ್ರಾಣಿಗಳಿಗೂ ಆದ ಒಡಂಬಡಿಕೆಗೆ ಇದೇ ಗುರುತಾಗಿರಲಿ" (ವಚನಗಳು 12, 13). ಭೂಮಿಯನ್ನು ಮೋಡ ಗಳು ಮುಚ್ಚುವಾಗಲೆಲ್ಲಾ ಆ ಮುಗಿಲು ಬಿಲ್ಲು ಕಾಣಿಸಿಕೊಳ್ಳುವುದು ಎಂದು ದೇವರು ವಾಗ್ದಾನ ಮಾಡಿದನು, ಮಾನವ ಮಾತುಗಳಲ್ಲಿ ಆತನು ವಿವರಿಸಿದನು, "ಆ ಬಿಲ್ಲು ಮೇಘಗಳಲ್ಲಿ ಕಾಣಿಸುವಾಗ ನಾನು ಅದನ್ನು ನೋಡಿ ದೇವರಾದ ನನಗೂ ಭೂಮಿಯ ಮೇಲಿರುವ ಎಲ್ಲಾ ಜೀವಜಂತುಗಳಿಗೂ ಆದ ಶಾಶ್ವತವಾದ ಒಡಂಬಡಿಕೆಯನ್ನು ಜ್ಞಾಪಕ ಮಾಡಿ ಕೊಳ್ಳುವೆನು" (ವಚನ 16).

ನೋಹನಿಗಾಗಿ, ಈ ಒಡಂಬಡಿಕೆಯು ಎರಡು ಪಕ್ಷಗಳ ಮಧ್ಯದಲ್ಲಿಯ ಒಪ್ಪಂದದ ವಿಷಯವಾಗಿರಲಿಲ್ಲ. ಒಡಂಬಡಿಕೆಯು ದೇವರಿಂದ ಮಾಡಲ್ಪಟ್ಟಿದ್ದು ಶರತ್ತುಗಳು ಇಲ್ಲದ್ದಾಗಿಯೂ ಸಾರ್ವತ್ರಿಕವಾದದ್ದಾಗಿಯೂ ಇತ್ತು.

© 2009 Truth for Today